**ಓ. ಎಸ್ . 6/2015**

**ಡಿ.ಡಬ್ಲ್ಯೂ- 4**

**(ದಿನಾಂಕಃ 12-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

ಪಾಟಿ ಸವಾಲು ಃ ಶ್ರೀ ಎಸ್ ಎಸ್ ಎಸ್ 7 ನೇ ಪ್ರತಿವಾದಿ ಪರ ವಕೀಲರಿಂದ -

ದಾವಾದ ಸರ್ವೆ ನಂ. 475 ಮತ್ತು 374 ಇರುತ್ತವೆ. ಸರ್ವೆ ನಂ.475, 4 ಎಕರೆ 12 ಅಣೆ ಇರುತ್ತದೆ. ಸರ್ವೆ ನಂ.374, 8 ಗುಂಟೆ ಇರುತ್ತದೆ. ಸರ್ವೆ ನಂ.475 ದಕ್ಷಿಣೋತ್ತರ ಇದ್ದು ನಡುವೆ ಒಂದು ಬಾಂದು ಇದೆ ಎಂದರೆ ಸರಿಯಲ್ಲ. ಎರಡು ಸಮಾನ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸದರಿ ಜಮೀನು ನೀರಾವರಿ ಎಂದರೆ ಸರಿ . ಸದರಿ ಜಮೀನಿಗೆ ಬಾವಿ , ಬೋರು ಮತ್ತು ಪಂಪ್ ಸೆಟ್ ಇದೆ ಎಂದರೆ ಸರಿ . ಅವುಗಳನ್ನು ನಾನೇ ಮಾಡಿರುತ್ತೇನೆ. ಬಾವಿ ಹಿರಿಯರ ಕಾಲದಲ್ಲಿ ತೋಡಿಸಿದ್ದು ಎಂದರೆ ಸರಿಯಲ್ಲ. ಸರ್ವೆ ನಂ.475 ರಲ್ಲಿ ಬಾವಿ ಇರುವುದಿಲ್ಲ. ಬಸಪ್ಪನ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಇರುತ್ತದೆ ಎಂದರೆ ಸರಿಯಲ್ಲ. ನೀರಾವರಿ ಇರುವುದರಿಂದ ಮೊದಲಿನಿಂದಲೂ ಕಬ್ಬು ಮತ್ತು ಸೋಯಬಿನ್ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2011 ರಿಂದ ಇತ್ತೀಚೆಗೆ ಕಬ್ಬು ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ಎಕರೆಗೆ 40-50 ಟನ್ ಕಬ್ಬು ಬೆಳೆಯುತ್ತಾರೆ ಎಂದರೆ ಸರಿ . ಸೋಯಬಿನ್ ನಿಂದ ವರ್ಷಕ್ಕೆ 50-60 ಸಾವಿರ ಆದಾಯ ಬರುತ್ತದೆ ಎಂದರೆ ಸರಿ .

ವಾದಿಯರ ತಂದೆ ಶೆಟ್ಟೆಪ್ಪ ನಮ್ಮ ಮಾವನಿಗೆ ಯಾವುದೇ ಕಾಗದ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪನ ಹೆಸರು ಕಡಿಮೆಯಾಗಿ ನಮ್ಮ ಮಾವ ಬಾಳಪ್ಪನ ಹೆಸರು ಬರಲು ಎಸಿರವರ ಆದೇಶವಿರುತ್ತದೆ. ಡೈರಿ ನಂ.3115 ಅದರ ಮೇಲೆ ¼ ಹಿಸ್ಸೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದು ನಮ್ಮ ಮಾವನವರಿಗೆ ಗೊತ್ತಿರುತ್ತದೆ. ಇನ್ನುಳಿದ ¼ ಹಿಸ್ಸೆ ಯಾವ ಆಧಾರದ ಮೇಲೆ ನಮ್ಮ ಮಾವನ ಹೆಸರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಾವು ಹುಕ್ಕೇರಿ ಪೋಲಿಸ ಠಾಣೆಯಲ್ಲಿ 7 ನೇ ಪ್ರತಿವಾದಿಯ ಮೇಲೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ 17-08-2006 ರಲ್ಲಿ ಎಫ್ ಐ ಆರ್ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಎಫ್ ಐ ಆರ್ ಆಗಿ ಸಿಸಿ ನಂ.290/2006 ರಂತೆ ಕೇಸ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕೇಸನ್ನು ನನ್ನ ಗಂಡ ಗೂಳಪ್ಪ ಕೊಟ್ಟಿರುತ್ತಾನೆ ಎಂದರೆ ನನಗೆ

ಗೊತ್ತಿಲ್ಲ. ಸದರಿ ಪಿರ್ಯಾದಿನಲ್ಲಿ ಬಸಪ್ಪ 1 ಎಕರೆ ಸಾಗು ಮಾಡುತ್ತಿದ್ದ ಎಂದು ಬರೆದಿದೆ ಎಂದರೆ ಸರಿಯಲ್ಲ. ದಿಃ 10-03-1970 ರಲ್ಲಿ ಶೆಟ್ಟೆಪ್ಪ ಹೊಲೇರ ಈತನು 7 ನೇ ಪ್ರತಿವಾದಿಯವರಿಗೆ ಬಕ್ಷೀಸು ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1970 ರಲ್ಲಿ 7 ನೇ ಪ್ರತಿವಾದಿ ಹೆಸರನ್ನು ಉತಾರಗಳಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ 2006 ರವರೆಗೆ 7 ನೇ ಪ್ರತಿವಾದಿ 2 ಎಕರೆ ಜಮೀನನ್ನು ಸಾಗು ಮಾಡುತ್ತಿದ್ದ ಎಂದರೆ ಸರಿಯಲ್ಲ. 1984 ರಲ್ಲಿ ವಾದಿ ಬಸವ್ವ ಮತ್ತು ಮಕ್ಕಳು ಸೇರಿ 7 ನೇ ಪ್ರತಿವಾದಿಗೆ ¼ ಹಿಸ್ಸೆಯನ್ನು ಹಕ್ಕುಬಿಟ್ಟ ಪತ್ರದ ಮೂಲಕ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರದ ಉತಾರಗಳಲ್ಲಿ 7 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಕಾಕಾ ಡಿವೈಎಸ್‌ಪಿ ಆಗಿ ನಿವೃತ್ತಿಯಾಗಿರುತ್ತಾರೆ ಎಂದರೆ ಇರಬಹುದು. ಅವರ ಮಗ ಸಿಪಿಐ ಆಗಿದ್ದರು ಎಂದರೆ ಸರಿ . ಆದರೆ ನಾವು ಅವರ ಸಹಾಯ ಪಡೆದಿರುವುದಿಲ್ಲ. 7 ನೇ ಪ್ರತಿವಾದಿ ಮನೆಮುಂದೆ ಹೋಗಿ ನಾವು ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು 7 ನೇ ಪ್ರತಿವಾದಿಯನ್ನು ನಾವೇ ಬಡೆದು ಅವರ ವಿರುದ್ಧ ಪಿರ್ಯಾದಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಡಿವೈಎಸ್‌ಪಿರವರ ಪ್ರಭಾವ ಬೀರಿ ಪೋಲಿಸ ಠಾಣೆಯಲ್ಲಿ ಸುಳ್ಳು ಪಿರ್ಯಾದನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ವಿರುದ್ಧ ಎರಡು ದೂರನ್ನು ಸಲ್ಲಿಸಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರು ನೀಡಿದ ನಂತರ ಪೋಲಿಸ ಠಾಣೆಯ ಕಡೆಯಿಂದ ಜಮೀನಿಗೆ ಹೋಗದಂತೆ ನಾವು ಬೆದರಿಕೆ ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. 2006 ರಿಂದ ವಾದಿ ಮತ್ತು 7 ನೇ ಪ್ರತಿವಾದಿಯರ ಮೇಲೆ 4 ಸಿವಿಲ್ ದಾವೆ ಚಾಲ್ತಿಯಲ್ಲಿವೆ ಎಂದರೆ ಸರಿ . ಅದೇ ರೀತಿ ಆರ್ ಟಿ ಎಸ್ ಪ್ರಕರಣ ಚಾಲ್ತಿಯಲ್ಲಿವೆ ಎಂದರೆ ಸರಿ . ಅದೇರೀತಿ ಮಾನ್ಯ ಉಚ್ಛನ್ಯಾಯಾಲಯದವರೆಗೂ ಸಹ ಕೇಸುಗಳನ್ನು ದಾಖಲಿಸಿದ್ದೇವೆ ಎಂದರೆ ಸರಿ . ವಾದಿಗಳು ಮತ್ತು 7 ನೇ ಪ್ರತಿವಾದಿಯರು ಅನಕ್ಷರಸ್ಥರಿದ್ದು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಹಕ್ಕು ಇದ್ದರೂ ಅವರಿಗೆ ಲುಕ್ಸಾನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಜಮೀನಿನಿಂದ ವರ್ಷಕ್ಕೆ 2-3 ಲಕ್ಷ ಆದಾಯ ಬರುತ್ತಿದ್ದು ಅದನ್ನು ನಾವೇ ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಸರಿ . ಅದು ನಮ್ಮ ಭೂಮಿ ಇರುತ್ತದೆ. ನನ್ನ ಗಂಡನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗಂಡ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಅವರ ಕಡೆಯಿಂದ ಮುಕ್ತಿಯಾರ ಪತ್ರ ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಕ್ಷೀಸು ಪತ್ರದ ಪ್ರಕಾರ 7 ನೇ ಪ್ರತಿವಾದಿಗೆ ದಾವಾಸ್ತಿಯ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಗಳು ನನಗೆ ಸಂಬಂಧಿಸಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ